**<u>ದಿನಾಂಕ 10.02.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>**

<u>ಮುಖ್ಯ ವಿಚಾರಣೆ : ಪ್ರತಿವಾದಿ ಪರವಾಗಿ ಶ್ರೀ ಕೆ.ವಿ.ಸಿ. ವಕೀಲರಿಂದ</u>

ನಾನು ಈ ದಾವೆಯಲ್ಲಿ ಪ್ರತಿವಾದ ಸಂಖ್ಯೆ 3 ಮತ್ತು 4 ರವರಿಂದ ಮುಕ್ತಾರು ನಾಮೆ ಪಡೆದು ಸಾಕ್ಷ್ಯ ನೀಡಲು ಅಧಿಕಾರ ಹೊಂದಿದವನಾಗಿರುತ್ತೇನೆ. ಈಗ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ, ಅದರಲ್ಲಿ ಬರೆದಿರುವ ಎಲ್ಲಾ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಮತ್ತು ಅವುಗಳು ಸತ್ಯವಾಗಿವೆ ಎಂದು ನಾನು ಪ್ರಮಾಣೀಕರಿಸುತ್ತೇನೆ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ.

ದಿನಾಂಕ 12.11.2020 ರ ಮುಕ್ತಾರು ನಾಮೆಯನ್ನು ನಿಡಿ-**1** ಎಂದು ಗುರುತಿಸಲಾಯಿತು.

ಸಾಕ್ಷಿಯು ಮಧ್ಯಂತರ ಅರ್ಜಿ ಸಂಖ್ಯೆ 7 ರೊಂದಿಗೆ ಹಾಜರುಪಡಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ನಿಶಾನೆಗಳಾಗಿ ಗುರುತಿಸಲಾಯಿತು.

| ಕ್ರಮ ಸಂಖ್ಯೆ | ವಿಷಯ | ಗುರುತು ಮಾಡಿದ ದಾಖಲೆ |
|---|---|---|
| 1 | ದಿನಾಂಕ 06.09.1995 ರ ನೊಂದಾಯಿತ ಕ್ರಯ ಪತ್ರ (ರಿ. ಸ.ನಂ. 75/1 ರ 10 ಎಕರೆ 27 ಗುಂಟೆ) | ನಿಡಿ-2 |
| 2 | ದಿನಾಂಕ 06.09.1995 ರ ಮತ್ತೊಂದು ನೊಂದಾಯಿತ ಕ್ರಯ ಪತ್ರ | ನಿಡಿ-3 |
| 3 | ದಿನಾಂಕ 28.09.1995 ರ ನೊಂದಾಯಿತ ಕ್ರಯ ಪತ್ರ | ನಿಡಿ-4 |
| 4 | ದಿನಾಂಕ 15.05.2015 ರ ಮರಣ ಶಾಸನ ಪತ್ರ | ನಿಡಿ-5 |
| 5 | ದಿನಾಂಕ 01.07.2019 ರ ಎರಡು ನೊಂದಾಯಿತು ಕ್ರಯ ಪತ್ರಗಳು | ನಿಡಿ-6 ಮತ್ತು 7 |
| 6 | ಎಂ.ಆರ್ ಹೆಚ್ 29/2017-18 | ನಿಡಿ-8 |
| 7 | ಎಂ.ಆರ್ ಹೆಚ್ 2/2019-20 | ನಿಡಿ-9 |
| 8 | ಎಂ.ಆರ್ ಟಿ 40/2017-18 | ನಿಡಿ-10 |
| 9 | ಎಂ.ಆರ್ ಹೆಚ್1/2019-20 | ನಿಡಿ-11 |

| | | |
|---|---|---|
| 10 | ಸ.ನಂ. 75/2 ರ 2019-20 ನೇ ಸಾಲಿನ ಗಣಕೀಕೃತ ಪಹಣಿ ಪತ್ರಿಕೆ | ನಿಡಿ-12 |
| 11 | ಸ.ನಂ. 75/3 ರ 2019-20 ನೇ ಸಾಲಿನ ಗಣಕೀಕೃತ ಪಹಣಿ ಪತ್ರಿಕೆ | ನಿಡಿ-13 |
| 12 | ಸ.ನಂ. 75/1 ರ 2019-20 ನೇ ಸಾಲಿನ ಗಣಕೀಕೃತ ಪಹಣಿ ಪತ್ರಿಕೆ | ನಿಡಿ-14 |
| 13 | ಸ.ನಂ. 75/2 ರ 2017-18 ನೇ ಸಾಲಿನ ಗಣಕೀಕೃತ ಪಹಣಿ ಪತ್ರಿಕೆ | ನಿಡಿ-15 |
| 14 | ಋಣಭಾರ ಪತ್ರ | ನಿಡಿ-16 |
| 15 | ಸ.ನಂ. 75/1 ರ 7 ಕೈ ಬರಹದದ ಪಹಣಿ ಪತ್ರಿಕೆಗಳ ದೃಢೀಕೃತ ನಕಲುಗಳು | ನಿಡಿ-17 ರಿಂದ 23 |
| 16 | ಎರಡು ಪಟ್ಟಾ ಪುಸ್ತಕಗಳು | ನಿಡಿ-24 ಮತ್ತು 25 |
| 17 | ಎರಡು ತೆರಿಗೆ ಪಾವತಿ ರಶೀದಿಗಳು | ನಿಡಿ-26 ಮತ್ತು 27 |

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ

ಸಹಿ/-
ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಗೌರಿಬಿದನೂರು.